ಉ) ವಾರ್ಷಿಕ ರೂ. 11,800 ಕ್ಕಿಂತ ಕಡಿಮೆ ಆದಾಯವಿರುವ ಎಲ್ಲಾ ಬಡವರು ಆಶ್ರಯ ಯೋಜನೆಯಡಿಯಲ್ಲಿ ಉಚಿತ ನಿವೇಶನ ಹೊಂದಲು ಅರ್ಹರಿರುತ್ತಾರೆ. ನೇಕಾರರಿಗೆ ಪ್ರತ್ಯೇಕವಾಗಿ ಬಡಾವಣೆ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ವಿಷಯ:- ರಾಜ್ಯದಲ್ಲಿರುವ ಗೋಮಾಳಗಳ ಸಂಖ್ಯೆ.

1470 (2042) **ಶ್ರೀ ಡಿ.ಆರ್. ಪಾಟೀಲ್ (ಗದಗ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಗೋಮಾಳಗಳು ಎಷ್ಟು?

ಆ) ಈ ಗೋಮಾಳಗಳ ಕ್ಷೇತ್ರ ಎಷ್ಟಿದೆ? (ಜಿಲ್ಲಾವಾರು ವಿವರ ನೀಡುವುದು)

ಇ) ಈ ಗೋಮಾಳಗಳನ್ನು ಹಸಿರು ಹುಲ್ಲುಗಾವಲುಗಳನ್ನಾಗಿ ಪರಿವರ್ತಿಸಲು ಗುಜರಾತ್ ಮಾದರಿಯ ಪ್ರಯೋಗ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಈ) ಗೋಮಾಳಗಳ ಅಕ್ರಮ ಬಳಕೆ ಹಾಗೂ ಸರ್ಕಾರಿ ಯೋಜನೆಗಳಲ್ಲಿ ಅದನ್ನು ಬಳಸಿಕೊಳ್ಳುವುದನ್ನು ತಡೆಯಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) 21,93,435–22 ಎಕರೆಗಳು

ಆ) (ಜಿಲ್ಲಾವಾರು ವಿವರ ಲಗತ್ತಿಸಿದೆ)

ಇ) ಇಲ್ಲ.

ಈ) ಗೋಮಾಳ ಜಮೀನುಗಳನ್ನು ರಕ್ಷಿಸಲು ಕಂದಾಯ ಇಲಾಖೆಯ ಸ್ಥಳೀಯ ಅಧಿಕಾರಿಗಳಿಗೆ ಸರ್ಕಾರದಿಂದ ಆಗಿಂದಾಗ್ಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಸರ್ಕಾರದ ಹಾಗೂ ಸಾರ್ವಜನಿಕ ಉದ್ದೇಶಗಳಿಗೆ ಅವಶ್ಯಕತೆ ಇದ್ದಲ್ಲಿ ಮಾತ್ರ ಮತ್ತು ಇತರೆ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಗೋಮಾಳ ಜಮೀನನ್ನು ಉಪಯೋಗಿಸಿಕೊಳ್ಳಲಾಗುವುದು.

ರಾಜ್ಯದಲ್ಲಿ ಲಭ್ಯವಿರುವ ಗೋಮಾಳ ಜಮೀನುಗಳ ಜಿಲ್ಲಾವಾರು ಮಾಹಿತಿ

	ಜಿಲ್ಲೆ	ಲಭ್ಯವಿರುವ ಗೋಮಾಳ ಜಮೀನು
1.	ಬೆಂಗಳೂರು (ನಗರ)	ಇಲ್ಲ
2.	ಬೆಂಗಳೂರು (ಗ್ರಾಮಾಂತರ)	1,34,244–22
3.	ತುಮಕೂರು	1,49,177–35
4.	ಕೋಲಾರ	2,09,095–18

1	2	3
5.	ಶಿವಮೊಗ್ಗ	4,74,866–00
6.	ಚಿತ್ರದುರ್ಗ	2,01,627–15
7.	ಮೈಸೂರು	61,430–16
8.	ಮಂಡ್ಯ	1,10,978–16
9.	ಚಿಕ್ಕಮಗಳೂರು	1,60,593–15
10.	ಕೊಡಗು	ಇಲ್ಲ
11.	ದಕ್ಷಿಣ ಕನ್ನಡ ಜಿಲ್ಲೆ	55,658–70
12.	ಹಾಸನ	1,49,000–00
13.	ಬೆಳಗಾಂ	45,557–00
14.	ಕಾರವಾರ	4,837–21
15.	ಬಿಜಾಪುರ	32,793–70
16.	ಧಾರವಾಡ	69,189–08
17.	ಗುಲ್ಬರ್ಗಾ	1,27,284–38
18.	ಬೀದರ್	95,584–10
19.	ಬಳ್ಳಾರಿ	1,160–68
20.	ರಾಯಚೂರು	49,389–00
		21,93,435-22

ವಿಷಯ:- ರಾಜ್ಯದ ಹೊರಗಿರುವ ಮುಜಾರಾಯಿ ಇಲಾಖೆಯ ಛತ್ರ ಹಾಗೂ ತಂಗುದಾಣಗಳು

1472 (2462) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಿಂದ ಹೊರಗಿರುವ ಮುಜರಾಯಿ ಇಲಾಖೆ ನಡೆಸುತ್ತಿರುವ ಚೌಲಟರಿ ಮತ್ತು ತಂಗುದಾಣಗಳು ಯಾವುವು?

ಆ) ಪ್ರತಿವರ್ಷ ಸುಧಾರಣೆಗೆ ತಗಲುವ ವೆಚ್ಚವೆಷ್ಟು?

ಇ) ಈ ಚೌಲಟರಿಗಳನ್ನು ನವೀಕರಿಸಲು ಯೋಜನೆ ಇದೆಯೇ? ಇದ್ದಲ್ಲಿ ಅಂದಾಜು ವೆಚ್ಚವೆಷ್ಟು?

ಈ) ಎಂದು ಪ್ರಾರಂಭಿಸಲಾಗುವುದು ಹಾಗೂ ಎಂದು ಪೂರ್ಣಗೊಳಿಸಲಾಗುವುದು?